**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालय:**

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## 2014ರ ಸೆಪ್ಟೆಂಬರ್ 1ರಂದು ನಡೆದ ಹಣಕಾಸು ಸಮಿತಿ ಹದಿನೈದನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ೧೫ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ ೦೧, ೨೦೧೪ರ ಸೋಮವಾರ ಬೆಳಿಗ್ಗೆ ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| 1. | **ಪ್ರೊ. ಶ್ರೀನಿವಾಸ ವರಖೇಡಿ,** ಕುಲಪತಿಗಳು (ಪ್ರಭಾರಿ) | ಅಧ್ಯಕ್ಷರು |
| 2. | **ಪ್ರೊ. ಕೆ.ಈ. ರಾಧಾಕೃಷ್ಣ,** ಪ್ರಶಾಸನ ಸಮಿತಿ ಸದಸ್ಯರು | ಸದಸ್ಯರು |
| 3. | **ಡಾ. ಪದ್ಮಾಶೇಖರ್,** ಪ್ರಶಿಕ್ಷಣ ಪರಿಷತ್ ಸದಸ್ಯರು | ಸದಸ್ಯರು |
| 4. | **ಶ್ರೀ ಅಶೋಕ್ ಬಾಗೋಜಿಕೊಪ್ಪ,** ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ | ಸದಸ್ಯರು |
| 5. | **ಪ್ರೊ. ಎಂ.ಕೆ. ಶ್ರೀಧರ್,** ಕುಲಸಚಿವರು | ಸದಸ್ಯರು |
| 6. | **ವಿದ್ವಾನ್ ಪಿ.ಆರ್. ಪಾಗೋಜಿ,** ಹಣಕಾಸು ಅಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| 1. | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ (ವಿಶ್ವವಿದ್ಯಾಲಯ), ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

### ವಿಷಯ 1: 2014–15ನೇ ಸಾಲಿನ 2014ನೇ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಆಯ–ವ್ಯಯಗಳ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2014–15ನೇ ಸಾಲಿನ 2014ನೇ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳ ಹಣಕಾಸು ವ್ಯವಹಾರಗಳ ವಿವರಗಳು ಈ ಕೆಳಗಿನಂತಿವೆ.

**ಏಪ್ರಿಲ್ 2014**

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರ.ಸಂ. | ಜಮದ ವಿವರ | ಮೊತ್ತ | ಕ್ರ.ಸಂ. | ಖರ್ಚಿನ ವಿವರ | ಮೊತ್ತ |
| 1 | ಏಪ್ರಿಲ್ 1, 2014ಕ್ಕೆ ಪ್ರಾರಂಭಿಕ ಶಿಲ್ಕು | 105,218,851.00 | 1 | ವೇತನ | 2,265,386.00 |
| 2 | ಜ್ಯೋತಿಷ್ಯ ಕೋರ್ಸ್ ಮಾನ್ಯತೆ ಶುಲ್ಕ | 85,000.00 | 2 | ಪಿಂಚಣಿ | 17,725.00 |
| 3 | ವಿದ್ಯಾರ್ಥಿವೇತನ ಹಿಂದುರಿಗಿದ ಮೊತ್ತ | 20,200.00 | 3 | ಸಭೆ | 63,547.00 |
| 4 | ಪದವಿ ಪ್ರಮಾಣಪತ್ರ ಶುಲ್ಕ | 70,600.00 | 4 | ನೂತನ ಬ್ಲಾಕ್ ಗ್ರಾಂಟ್ ಖಾತೆಗೆ ವರ್ಗಾವಣೆ | 49,896,896.00 |
| 5 | ಕ್ರೋಢೀಕೃತ/ತಿದ್ದುಪಡಿ ಅಂಕಪಟ್ಟಿ ಮತ್ತು ವಲಸೆ ಪ್ರಮಾಣಪತ್ರ ಶುಲ್ಕ | 5,500.00 | 5 | ಸಮಾರಂಭ/ಕಾರ್ಯಾಗಾರ/ವಿಚಾರ ಸಂಕಿರಣ/ ವಿಶೇಷೋಪನ್ಯಾಸ/ಸ್ಪರ್ಧೆಗಳು | 129,262.00 |
| 6 | ಸಂಶೋಧನ ಕೇಂದ್ರ ನೋಂದಣಿ/ಮಾನ್ಯತೆ ಶುಲ್ಕ | 15,000.00 | 6 | ಕಛೇರಿ ಸಾದಿಲ್ವಾರು | 25,000.00 |
| 7 | ಹಳೇ ಉತ್ತರಪತ್ರಿಕೆಗಳ ಮಾರಾಟದ ಬಾಬ್ತು | 1,600.00 | 7 | ಪರೀಕ್ಷಾ ವೆಚ್ಚ | 243,967.00 |
| 8 | ಮಾನ್ಯತೆ ಶುಲ್ಕ | 4,000.00 | 8 | ಅನುದಾನಿತ ಸಂಸ್ಕೃತ ಪಾಠಶಾಲೆ/ಕಾಲೇಜುಗಳ ವೇತನ | 1,619,179.00 |
| 9 | ಸಭಾಂಗಣದ ಬಾಡಿಗೆ ಶುಲ್ಕ | 500.00 | 9 | ದೂರವಾಣಿ / ಇಂಟರ್‌ನೆಟ್ / ನಿರ್ವಹಣೆ | 11,715.00 |
| 10 | ಡಿ.ಲಿಟ್ ಪದವಿ ನೋಂದಣಿ ಶುಲ್ಕ | 50,000.00 | 10 | ವಾಹನಗಳಿಗೆ ಇಂಧನ/ರಿಪೇರಿ/ಇನ್ಸೂರೆನ್ಸ್ | 44,260.00 |
| 11 | ಮಾಹಿತಿ ಹಕ್ಕು ಶುಲ್ಕ | 350.00 | 11 | ಲೇಖನಸಾಮಗ್ರಿ | 24,432.00 |
| 12 | ಪಠ್ಯಪುಸ್ತಕಗಳ ಮಾರಾಟದ ಬಾಬ್ತು | 5,657.00 | 12 | ಮುದ್ರಣ ವೆಚ್ಚ | 266,757.00 |
| 13 | ಮೌಲ್ಯಮಾಪಕರ ನೋಂದಣಿ ಶುಲ್ಕ | 600.00 | 13 | ದತ್ತಿನಿಧಿ ಮೊತ್ತವನ್ನು ಸ್ಥಿರನಿಧಿ ಠೇವಣಿ ಇಡಲು | 100,000.00 |
| 14 | ಸ್ವರ್ಣಪದಕ ನೀಡಲು ಹಾಗೂ ದತ್ತಿನಿಧಿ ಸ್ಥಾಪಿಸಲು ನೀಡಿದ ಮೊತ್ತ | 120,000.00 | 14 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 18,000.00 |
| | | | 15 | ಧ್ವನ್ಯಾಲೋಕ ಗ್ರಂಥದ ಅನುವಾದಕರ ರಾಯಧನ | 16,800.00 |
| | | | 16 | ಎಂ.ಫಿಲ್ ವಿದ್ಯಾರ್ಥಿವೇತನ | 3,400.00 |
| | | | 17 | ಅಂಚೆ ವೆಚ್ಚ | 11,000.00 |
| | | | 18 | ಕುಲಪತಿಗಳ ಗೃಹಕಛೇರಿ ವೆಚ್ಚ | 5,000.00 |

| | | | | | |
|---|---|---|---|---|---|
| | | | 19 | ಎಲೆಕ್ಟ್ರಿಕಲ್ ಕಾಮಗಾರಿಗಳ ವೆಚ್ಚ | 10,592.00 |
| | | | 20 | ಹೊರಗುತ್ತಿಗೆ ಸಿಬ್ಬಂದಿ / ಸಂಚಿತ ವೇತನ | 16,415.00 |
| | | | 21 | ಕಂಪ್ಯೂಟರ್/ಪ್ರಿಂಟರ್ಸ್/ಜೆರಾಕ್ಸ್ ಮೆಷೀನ್ ನಿರ್ವಹಣೆ | 13,360.00 |
| | | | 22 | ಅತಿಥಿ ಉಪನ್ಯಾಸಕರ ವೇತನ | 33,900.00 |
| | | | 23 | ಬ್ಯಾಂಕ್ ಚಾರ್ಜ್ | 800.00 |
| | **ಜಮೆಗಳು** | **379,007.00** | | **ಪಾವತಿಗಳು** | **54,837,393.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (30.04.2014ಕ್ಕೆ)** | **50,760,465.00** |
| | **ಒಟ್ಟು ಮೊತ್ತ** | **105,597,858.00** | | **ಒಟ್ಟು ಮೊತ್ತ** | **105,597,858.00** |

## ಮೇ 2014

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರ.ಸಂ. | ಜಮದ ವಿವರ | ಮೊತ್ತ | ಕ್ರ.ಸಂ. | ಖರ್ಚಿನ ವಿವರ | ಮೊತ್ತ |
| 1 | ಮೇ 1, 2014ಕ್ಕೆ ಪ್ರಾರಂಭಿಕ ಶಿಲ್ಕು | 50,760,465.00 | 1 | ವೇತನ | 2,130,530.00 |
| 2 | ಜ್ಯೋತಿಷ್ಯ ಕೋರ್ಸ್ ಮಾನ್ಯತೆ ಶುಲ್ಕ | 15,000.00 | 2 | ಪಿಂಚಣಿ ನಿಧಿ / ರಜಾ ವೇತನ ವಂತಿಗೆ | 211,281.00 |
| 3 | ವಿದ್ಯಾರ್ಥಿವೇತನ ಹಿಂದುರಿಗಿದ ಮೊತ್ತ | 73,300.00 | 3 | ಸಭೆ | 27,720.00 |
| 4 | ಪದವಿ ಪ್ರಮಾಣಪತ್ರ ಶುಲ್ಕ | 500.00 | 4 | ಗೋಕರ್ಣ ಕಾಲೇಜಿನ ಸಾದಿಲ್ವಾರು ವೆಚ್ಚ | 17,952.00 |
| 5 | ಕ.ಸಾ.ಪ. ಸಭಾಂಗಣ ಕಾಯ್ದಿರಿಸಲು ಪಾವತಿಸಿದ್ದ ಮುಂಗಡದ ಮೊತ್ತ | 2,000.00 | 5 | ಸಮಾರಂಭ/ಕಾರ್ಯಾಗಾರ/ವಿಚಾರ ಸಂಕಿರಣ/ ವಿಶೇಷೋಪನ್ಯಾಸ/ಸ್ಪರ್ಧೆಗಳು | 414,287.00 |
| 6 | ಮರುಮೌಲ್ಯಮಾಪನ ಶುಲ್ಕ | 14,000.00 | 6 | ಕಛೇರಿ ಸಾದಿಲ್ವಾರು | 10,000.00 |
| 7 | ರದ್ದಿ ಕಾಗದಗಳ ಮಾರಾಟದ ಬಾಬ್ತು | 2,050.00 | 7 | ಪರೀಕ್ಷಾ ವೆಚ್ಚ | 169,412.00 |
| 8 | ಉಳಿಕೆ / ನಗದು ಜಮೆ | 1,798.00 | 8 | ಅನುದಾನಿತ ಸಂಸ್ಕೃತ ಪಾಠಶಾಲೆ ವೇತನ | 3,287,263.00 |
| 9 | ಇನ್‌ಫೋಸಿಸ್ ಫೌಂಡೇಶನ್ ಸ್ಥಾಪಿಸಿದ ದತ್ತಿನಿಧಿ | 2,000,000.00 | 9 | ದೂರವಾಣಿ / ಇಂಟರ್‌ನೆಟ್ / ನಿರ್ವಹಣೆ | 5,772.00 |
| | | | 10 | ವಾಹನಗಳಿಗೆ ಇಂಧನ/ರಿಪೇರಿ/ಇನ್ಶೂರೆನ್ಸ್ | 60,670.00 |
| | | | 11 | ಲೇಖನಸಾಮಗ್ರಿ | 4,668.00 |
| | | | 12 | ಮುದ್ರಣ ಮತ್ತು ಡಿಟಿಪಿ ವೆಚ್ಚ | 279,918.00 |
| | | | 13 | ಇನ್‌ಫೋಸಿಸ್ ಸಂಸ್ಥೆಯ ದತ್ತಿನಿಧಿ ಮೊತ್ತವನ್ನು ಎಸ್‌ಬಿಎಂ ಬ್ಯಾಂಕಿನ ಚಾಮರಾಜಪೇಟೆ ಶಾಖೆಯಲ್ಲಿ ಸ್ಥಿರನಿಧಿ ಠೇವಣಿ ಇಡಲು | 2,000,000.00 |
| | | | 14 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 18,000.00 |
| | | | 15 | ಡಿ.ಲಿಟ್ ಮುಕ್ತಸಂವಾದ ಮತ್ತು ಮೌಲ್ಯಮಾಪನ ವೆಚ್ಚ | 20,700.00 |
| | | | 16 | ವಿದ್ಯಾರ್ಥಿವೇತನ | 3,558,000.00 |
| | | | 17 | ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅನುದಾನವನ್ನು ಸ್ಥಿರನಿಧಿ ಠೇವಣಿ ಇಡಲು | 4,301,000.00 |
| | | | 18 | ಕುಲಪತಿಗಳ ಗೃಹಕಛೇರಿ ವೆಚ್ಚ | 5,000.00 |
| | | | 19 | ವಿಶ್ವವಿದ್ಯಾಲಯದ ಜಾಲತಾಣ ನಿರ್ವಹಣೆ | 5,412.00 |
| | | | 20 | ವಿದ್ಯುತ್ ವೆಚ್ಚ ಮತ್ತು ಹೆಚ್ಚುವರಿ ಠೇವಣಿ ಮೊತ್ತ | 12,400.00 |
| | | | 21 | ಕಂಪ್ಯೂಟರ್/ಪ್ರಿಂಟರ್ಸ್/ಜೆರಾಕ್ಸ್ ಮೆಷೀನ್ ನಿರ್ವಹಣೆ | 6,680.00 |
| | | | 22 | ಅತಿಥಿ ಉಪನ್ಯಾಸಕರ ವೇತನ | 15,300.00 |
| | | | 23 | ಬ್ಯಾಂಕ್ ಚಾರ್ಜ್ | 400.00 |
| | | | 24 | ಕುಡಿಯುವ ನೀರು ಶುದ್ಧೀಕರಣ ಯಂತ್ರದ ಬಿಡಿಭಾಗಗಳು | 2,550.00 |
| | | | 25 | ಜಾಹೀರಾತು ವೆಚ್ಚ | 5,208.00 |
| | **ಜಮೆಗಳು** | **2,108,648.00** | | **ಪಾವತಿಗಳು** | **16,570,123.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (31.05.2014ಕ್ಕೆ)** | **36,298,990.00** |
| | **ಒಟ್ಟು ಮೊತ್ತ** | **52,869,113.00** | | **ಒಟ್ಟು ಮೊತ್ತ** | **52,869,113.00** |

**ಜೂನ್ 2014**

| ಜಮದ ಮೊತ್ತ | | | ಖರ್ಚಿನ ಮೊತ್ತ | | |
|---|---|---|---|---|---|
| ಕ್ರ.ಸಂ. | ಜಮದ ವಿವರ | ಮೊತ್ತ | ಕ್ರ.ಸಂ. | ಖರ್ಚಿನ ವಿವರ | ಮೊತ್ತ |
| 1 | ಜೂನ್ 1, 2014ಕ್ಕೆ ಪ್ರಾರಂಭಿಕ ಶಿಲ್ಕು | 36,298,990.00 | 1 | ವೇತನ | 2,250,062.00 |
| 2 | ಜ್ಯೋತಿಷ್ಯ ಕೋರ್ಸ್ ಮಾನ್ಯತೆ ಶುಲ್ಕ | 30,000.00 | 2 | ಪಿಂಚಣಿ/ರಜಾ ವೇತನ ವಂತಿಗೆ | 14,886.00 |
| 3 | ನಗದು (ಉಳಿಕೆ) ಜಮೆ/ವರ್ಗಾವಣೆ | 13,333.00 | 3 | ಸಭೆ | 39,410.00 |
| 4 | ಪಿಎಚ್.ಡಿ./ಎಂ.ಫಿಲ್ ಪ್ರವೇಶ ಅರ್ಜಿ ಶುಲ್ಕ | 5,100.00 | 4 | ವೈಫೈ ಉಪಕರಣ ಅಳವಡಿಕೆ ವೆಚ್ಚ | 81,498.00 |
| 5 | ಸ್ವರ್ಣಪದಕ ನೀಡಲು ಸ್ಥಾಪಿಸಿದ ದತ್ತಿನಿಧಿ ಮೊತ್ತ ಮೇಲಿನ ಬಡ್ಡಿ ಸ್ವೀಕೃತಿ | 98,640.00 | 5 | ಸಮಾರಂಭ/ಕಾರ್ಯಾಗಾರ/ವಿಚಾರಸಂಕಿರಣ/ ವಿಶೇಷೋಪನ್ಯಾಸ/ಸ್ಪರ್ಧೆಗಳು | 19,336.00 |
| 6 | ಮರುಮೌಲ್ಯಮಾಪನ ಶುಲ್ಕ | 5,700.00 | 6 | ಕಛೇರಿ ಸಾದಿಲ್ವಾರು | 10,000.00 |
| 7 | ಮಾನ್ಯತೆ ಶುಲ್ಕ | 1,000.00 | 7 | ಪರೀಕ್ಷಾ ವೆಚ್ಚ | 84,561.00 |
| 8 | ಪಠ್ಯಪುಸ್ತಕಗಳ ಮಾರಾಟದ ಬಾಬ್ತು | 201,580.00 | 8 | ಪ್ರಯಾಣಭತ್ಯೆ/ದಿನಭತ್ಯೆ | 25,580.00 |
| 9 | ಬ್ಲಾಕ್ ಗ್ರಾಂಟ್ ಖಾತೆ (ಸಂಖ್ಯೆ: 64140220134; ಎಸ್.ಬಿ.ಎಂ., ಚಾಮರಾಜಪೇಟೆ) ಯಿಂದ ವರ್ಗಾವಣೆಯಾದ ಮೊತ್ತ | 885,965.00 | 9 | ದೂರವಾಣಿ / ಇಂಟರ್‌ನೆಟ್ / ನಿರ್ವಹಣೆ | 11,868.00 |
| 10 | ಉಳಿತಾಯ ಖಾತೆ ಮೇಲಿನ ಬಡ್ಡಿ ಸ್ವೀಕೃತಿ | 939,428.00 | 10 | ವಾಹನಗಳಿಗೆ ಇಂಧನ/ರಿಪೇರಿ/ಇನ್ಶೂರೆನ್ಸ್ | 37,124.00 |
| | | | 11 | ಲೇಖನಸಾಮಗ್ರಿ | 1,571.00 |
| | | | 12 | ಮುದ್ರಣ & ಡಿಟಿಪಿ ವೆಚ್ಚ | 255,852.00 |
| | | | 13 | ಕಛೇರಿ ನಿರ್ವಹಣೆ | 4,615.00 |
| | | | 14 | ಕಾನೂನು ಸಲಹೆಗಾರರ ಸಂಭಾವನೆ/ವೃತ್ತಿ/ದಾವೆಗಳ ಸೇವಾ ಶುಲ್ಕ | 45,200.00 |
| | | | 15 | ವಿದ್ಯುತ್ ವೆಚ್ಚ | 4,479.00 |
| | | | 16 | ಘಟಕ ಕಾಲೇಜು ಸಾದಿಲ್ವಾರು ವೆಚ್ಚ | 30,000.00 |
| | | | 17 | ಅಂಚೆ & ಕೊರಿಯರ್ ವೆಚ್ಚ | 2,360.00 |
| | | | 18 | ಗ್ರಂಥಾಲಯಕ್ಕೆ ಪುಸ್ತಕಗಳ ಖರೀದಿ | 5,400.00 |
| | | | 19 | ಹೊರಗುತ್ತಿಗೆ ಸಿಬ್ಬಂದಿ / ಸಂಚಿತ ವೇತನ | 10,500.00 |
| | | | 20 | ಜೆರಾಕ್ಸ್ ಯಂತ್ರಕ್ಕೆ ಟೋನರ್ ಖರೀದಿ | 7,199.00 |
| | | | 21 | ಅತಿಥಿ ಉಪನ್ಯಾಸಕರ ವೇತನ | 26,100.00 |
| | | | 22 | ಬ್ಯಾಂಕ್ ಚಾರ್ಜ್ | 1,365.00 |
| | **ಜಮೆಗಳು** | **2,180,746.00** | | **ಪಾವತಿಗಳು** | **2,968,966.00** |
| | | | | **ಬ್ಯಾಂಕಿನಲ್ಲಿರುವ ಅಂತಿಮ ಶಿಲ್ಕು (30.06.2014ಕ್ಕೆ)** | **35,510,770.00** |
| | **ಒಟ್ಟು ಮೊತ್ತ** | **38,479,736.00** | | **ಒಟ್ಟು ಮೊತ್ತ** | **38,479,736.00** |

ಮೇಲಿನ ಆಯ-ವ್ಯಯಗಳಿಗೆ ಸಂಬಂಧಿಸಿದಂತೆ ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ಸಭೆಯು 2014-15ನೇ ಸಾಲಿನ ಮೊದಲನೇ ತ್ರೈಮಾಸಿಕ (2014ನೇ ಏಪ್ರಿಲ್, ಮೇ ಮತ್ತು ಜೂನ್) ಖರ್ಚು-ವೆಚ್ಚಗಳ ಸಂಪೂರ್ಣ ವಿವರಗಳನ್ನು ಪರಿಶೀಲಿಸಿತು. ಎಲ್ಲ ವೆಚ್ಚಗಳಿಗೂ ಸಭೆಯು ಅನುಮೋದನೆಯನ್ನು ನೀಡಿತು.**

**ವಿಷಯ 2: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳಿಗೆ ನೂತನ ಪಿಂಚಣಿ ಯೋಜನೆ (NPS)ಗೆ ಒಳಪಡಿಸುವ ಹಾಗೂ ವೈದ್ಯಕೀಯ ವೆಚ್ಚ ಮರುಪಾವತಿ ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2010ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 2012ರ ಸೆಪ್ಟೆಂಬರ್ ತಿಂಗಳಿನಿಂದ ಹಂತ ಹಂತವಾಗಿ ವಿಶ್ವವಿದ್ಯಾಲಯಕ್ಕೆ ಯುಜಿಸಿ/ರಾಜ್ಯ ವೇತನಶ್ರೇಣಿಯ ಬೋಧಕ-ಬೋಧಕೇತರ ಸಿಬ್ಬಂದಿಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ. ಈ ಸಿಬ್ಬಂದಿಗಳು ನೂತನ ಪಿಂಚಣಿ ಯೋಜನೆ(**NPS**)ಗೆ ಒಳಪಡಲಿದ್ದು, ಇವರಿಗೆ ಈ ಯೋಜನೆಯನ್ನು ಕಲ್ಪಿಸಬೇಕಾಗಿದೆ. ಅಲ್ಲದೇ, ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಸರ್ಕಾರದ ವೈದ್ಯಕೀಯ ಸೌಲಭ್ಯ ಇಲ್ಲದ ಕಾರಣ, ಇವರ ಅನಾರೋಗ್ಯದ ಸಂದರ್ಭದಲ್ಲಿನ ವೈದ್ಯಕೀಯ ವೆಚ್ಚಗಳನ್ನು ಮರುಪಾವತಿಸಬೇಕಾಗಿದೆ. ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ವಿಶ್ವವಿದ್ಯಾಲಯದ 2014-15ನೇ ಸಾಲಿನ ಕ್ರಿಯಾಯೋಜನೆಯಲ್ಲಿ ರೂ. 3,00,000/-ಗಳನ್ನು ಮೀಸಲಿರಿಸಲಾಗಿದೆ. ನಿಯಮಾನುಸಾರ ಈ ಸೌಲಭ್ಯಗಳನ್ನು ವಿಶ್ವವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳಿಗೆ ನೀಡಲು ಹಣಕಾಸು ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ: **ವಿಶ್ವವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿಗಳನ್ನು ನಿಯಮಾನುಸಾರ ನೂತನ ಪಿಂಚಣಿ ಯೋಜನೆ(NPS)ಗೆ ಒಳಪಡಿಸುವುದಕ್ಕೆ ಸಭೆಯು ಒಪ್ಪಿಗೆಯನ್ನು ನೀಡಿತು. ಈ ಸಂಬಂಧವಾಗಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ NPSಗೆ ಪ್ರತ್ಯೇಕ ಖಾತೆಯನ್ನು ತೆರೆದು, ಸಿಬ್ಬಂದಿಗಳು ನೇಮಕಗೊಂಡಾಗಿನಿಂದ ವಿಶ್ವವಿದ್ಯಾಲಯವು ಪಾವತಿಸಬೇಕಾದ ಈವರೆಗಿನ ಬಾಕಿ ಮೊತ್ತ ರೂ. 19,02,262/-ಗಳನ್ನು ಒಮ್ಮೆಲೇ ಜಮೆ ಮಾಡಲು ಸೂಚಿಸಿತು. ಸಿಬ್ಬಂದಿಗಳು ಪಾವತಿಸಬೇಕಾದ ಬಾಕಿಮೊತ್ತವನ್ನು ವಿಶ್ವವಿದ್ಯಾಲಯದ ಅನುದಾನದಿಂದ ಸಿಬ್ಬಂದಿಗಳಿಗೆ ಸಾಲ ರೂಪದಲ್ಲಿ ನೀಡಿ ಪಾವತಿಸಲು ಹಾಗೂ ಆ ಸಾಲದ ಮೊತ್ತವನ್ನು ಬ್ಯಾಂಕ್ ಬಡ್ಡಿದರಕ್ಕೆ ಅನುಗುಣವಾಗಿ ಸಿಬ್ಬಂದಿಗಳ ವೇತನದಲ್ಲಿ ನಿರ್ದಿಷ್ಟ**

ಕಾಲಾವಧಿಯೊಳಗೆ ಈ ಮೊತ್ತವನ್ನು ಕಟಾಯಿಸಿಕೊಳ್ಳಲು ಸೂಚಿಸಿತು. ಒಂದುವೇಳೆ ತಮ್ಮ ಬಾಕಿಮೊತ್ತವನ್ನು ಒಮ್ಮೆಲೇ ಪಾವತಿಸಲು ಸಿಬ್ಬಂದಿಗಳು ಒಪ್ಪಿಕೊಂಡಲ್ಲಿ, ಅವರಿಂದ ಪೂರ್ಣ ಮೊತ್ತವನ್ನು ಪಡೆದು ಖಾತೆಗೆ ಜಮೆ ಮಾಡಬಹುದೆಂದು ನಿರ್ಧರಿಸಿತು.

ವೈದ್ಯಕೀಯ ವೆಚ್ಚ ಮರುಪಾವತಿಗೆ ಸಂಬಂಧಿಸಿದಂತೆ, ಉತ್ತಮ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಸರ್ಕಾರಿ ಸ್ವಾಮ್ಯದ ಕಂಪನಿಯೊಂದರಿಂದ ಗುಂಪುವಿಮೆ ಯೋಜನೆಯನ್ನು ಅಳವಡಿಸಿಕೊಳ್ಳಬಹುದೆಂದೂ ಸಭೆಯು ತೀರ್ಮಾನಿಸಿತು. ಆ ವಿಮೆಗೆ ಅರ್ಧದಷ್ಟನ್ನು ವಿಶ್ವವಿದ್ಯಾಲಯವು ನೀಡುವ ಮೂಲಕ ಸಿಬ್ಬಂದಿಗಳಿಗೆ ಹೆಚ್ಚಿನ ಮೊತ್ತದ ವಿಮಾಸೌಲಭ್ಯ ಒದಗಿಸಬಹುದಾಗಿದೆ ಎಂದು ಸದಸ್ಯರು ಅಭಿಪ್ರಾಯಪಟ್ಟರು. ಗುಂಪುವಿಮೆಯಿಂದ ಹೊರತಾದ ವೈದ್ಯಕೀಯ ಸೌಲಭ್ಯಗಳ ವೆಚ್ಚಗಳನ್ನು ಮರುಪಾವತಿಸುವ ಬಗೆಗೆ ಇತರೆ ವಿಶ್ವವಿದ್ಯಾಲಯಗಳಲ್ಲಿರುವ ನಿಯಮಗಳನ್ನು ತರಿಸಿಕೊಂಡು ಕುಲಪತಿಗಳು ಕ್ರಮವಹಿಸಲು ಸಭೆಯು ಸೂಚಿಸಿತು.

| | |
|---|---|
| **ವಿದ್ವಾನ್ ಪಿ.ಆರ್. ಪಾಗೋಜಿ** | **ಪ್ರೊ. ಶ್ರೀನಿವಾಸ ವರಖೇಡಿ** |
| ಹಣಕಾಸು ಅಧಿಕಾರಿ | ಅಧ್ಯಕ್ಷರು |